4) ಈ ಮೇಲಿನ ಆಪಾದನೆಗಳಿಂದಾಗಿ ಸದರೀ ಆಪಾದಿತ ಅಧಿಕಾರಿಯ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಗೂ ಕೆ.ಸಿ.ಎಸ್.ಆರ್.ನಿಯಮ 214 ರಡಿ ವಿಚಾರಣೆ ನಡೆಸುವುದು.

ಜಾಗೃತ ದಳದ ತನಿಖಾ ವರದಿಯ ಶಿಫಾರಸ್ಸುಗಳನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಲು ಆಪಾದನಾ ಪಟ್ಟಿಗಳನ್ನು ತಯಾರಿಸಲಾಗಿದ್ದು, ಶಿಸ್ತು ಪ್ರಕ್ರಿಯೆಯನ್ನು ಜರುಗಿಸಲಾಗುತ್ತಿದೆ.

ಆ) ತಪ್ಪಿತಸ್ಥ ಅಧಿಕಾರಿಯ ವಿರುದ್ಧ ಕೆ.ಸಿ.ಎಸ್.ಆರ್. ನಿಯಮ 214 ರಡಿ ಶಿಸ್ತು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇಲಾಖಾ ವಿಚಾರಣಾ ವರದಿಯ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಶ್ರೀ ರಾಜಪ್ಪಗೌಡ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) ಇವರು ತನಿಖಾ ವರದಿಯಲ್ಲಿ ಗುರುತಿಸಲ್ಪಟ್ಟ ಅಧಿಕಾರಿಯಾಗಿರುತ್ತಾರೆ. ತನಿಖಾ ವರದಿಯ ಆಧಾರದ ಮೇಲೆ ಸದರೀ ಅಧಿಕಾರಿಯಿಂದ ವಸೂಲಿ ಮಾಡುವ ಹಣ ಎಷ್ಟು ಎಂಬುದನ್ನು ನಿರ್ಧರಿಸಲಾಗುವುದು.

ಈ) ಸರ್ಕಾರವು ಇತ್ತೀಚೆಗೆ ಜಾರಿಗೆ ತಂದಿರುವ ಕರ್ನಾಟಕ ಟ್ರಾನ್ಸ್‌ಪರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ಸ್ ರೂಲ್ಸ್, 2000ರ ನಿಯಮ 13ರಡಿ, ಯಾವುದೇ ಸರ್ಕಾರಿ ಅಧಿಕಾರಿಯು ಅವರು ನಿವೃತ್ತಿ ಹೊಂದುವುದು ಆರು ತಿಂಗಳು ಉಳಿದಾಗ ಟೆಂಡರ್‌ಗೆ ಒಪ್ಪಿಗೆ ನೀಡುವ ಮುನ್ನ ಅವರ ಮೇಲಾಧಿಕಾರಿಗಳ ಅನುಮೋದನೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಆದ್ದರಿಂದ ಈ ನಿಯಮವು ಇಂಥಹ ಅಕ್ರಮಗಳನ್ನು ತಡೆಗಟ್ಟುವಲ್ಲಿ ಸಹಾಕಾರಿಯಾಗುತ್ತದೆ.

ಹಾಸನ ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿ ಯೋಜನೆ

710(193) ಶ್ರೀ ಹನುಮೇಗೌಡ ಕೆ.ಹೆಚ್. (ಹಾಸನ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಯಲ್ಲಿ ಯಾವ ಯಾವ ವಿಧಾನ ಸಭಾ ಕ್ಷೇತ್ರಕ್ಕೆ ಜಲಾನಯನ ಅಭಿವೃದ್ಧಿ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಎಷ್ಟು ಹಣ ಬಿಡುಗಡೆಯಾಗಿದೆ ವಿವರ ನೀಡುವುದು?

ಆ) ಹಾಲಿ ಕಾರ್ಯಗತವಾಗುತ್ತಿರುವ (ವಿಧಾನ ಸಭಾ ಕ್ಷೇತ್ರವಾರು) ಕಾಮಗಾರಿಗಳ ವಿವರಗಳನ್ನು ನೀಡುವುದು.

ಇ) ವಿಧಾನ ಸಭಾ ಕ್ಷೇತ್ರವಾರು ಪಾವತಿಯಾಗಿರುವ ಅನುದಾನದ ಬಾಬ್ತು ನೀಡಿರುವ ವಿವರ ತಿಳಿಸುವುದು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಜಲಾನಯನ ಅಭಿವೃದ್ಧಿ ಯೋಜನೆಯಡಿ ಹಾಸನ ಜಿಲ್ಲೆಯ ವಿಧಾನ ಸಬಾ ಕ್ಷೇತ್ರಗಳಿಗೆ ಒಟ್ಟಾರೆ 712.602 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದ್ದು, ಇದರ ವಿಧಾನ ಸಬಾ ಕ್ಷೇತ್ರವಾರು ಹಾಗೂ ವರ್ಷವಾರು ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ 1 ರಲ್ಲಿ ನೀಡಲಾಗಿದೆ.

ಅ) ಹಾಸನ ಜಿಲ್ಲೆಯಲ್ಲಿ 2002-2003ನೇ ಸಾಲಿನಲ್ಲಿ ಒಟ್ಟು 941.901 ಲಕ್ಷ ರೂಪಾಯಿಗಳ ವೆಚ್ಚದಲ್ಲಿ 463 ಜಲಾನಯಗಳನ್ನು ಆಯ್ಕೆ ಮಾಡಿ ಅನುಮೋದಿಸಲಾಗಿದ್ದು, ಇವುಗಳ ವಿವರಗಳನ್ನು ಅನುಬಂಧ 2 ರಲ್ಲಿ ನೀಡಲಾಗಿದೆ. ಇವುಗಳು ಪ್ರಾರಂಭವಾಗುವ ಹಂತದಲ್ಲಿದೆ.

ಇ) ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ವಿಧಾನ ಸಭಾ ಕ್ಷೇತ್ರವಾರು ಒಟ್ಟಾರೆ 712.602 ಲಕ್ಷಗಳನ್ನು ಕಾಮಗಾರಿಗಳಿಗಾಗಿ ಪಾವತಿಯಾಗಿದ್ದು, ಇವುಗಳ ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ.

ಅನುಬಂಧ-1

ಹಾಸನ ಜಿಲ್ಲಾ ಜಲಾನಯನ ಅಭಿವೃದ್ಧಿ ಯೋಜನೆಯಡಿ ಕಳೆದ ಮೂರು ವರ್ಷಗಳಿಂದ ಬಿಡುಗಡೆಯಾದ ಹಣದ ವಿವರ (ವಿಧಾನಸಭಾ ಕ್ಷೇತ್ರವಾರು)

(ಮೊಬಲಗು ರೂ. ಲಕ್ಷಗಳಲ್ಲಿ)

ಕ್ರ. ಸಂ.	ವಿಧಾನಸಭಾ ಕ್ಷೇತ್ರದ ಹೆಸರು	ವರ್ಷವಾರು ಬಿಡುಗಡೆ			ಒಟ್ಟು
		99-2000	2000-01	2001-02	
1.	ಹಾಸನ	-	19.212	25.060	44.272
2.	ಗಂಡಸಿ	61.184	21.667	50.276	133.127
3.	ಅರಸೀಕೆರೆ	8.090	8.092	31.552	47.734
4.	ಶ್ರವಣಬೆಳಗೊಳ	4.990	17.890	79.700	102.580
5.	ಹೊಳೆನರಸೀಪುರ	0.885	13.127	46.999	61.011
6.	ಬೇಲೂರು	2.004	32.418	74.218	108.640
7.	ಅರಕಲಗೂಡು	3.112	8.251	42.630	53.993
8.	ಸಕಲೇಶಪುರ	3.896	48.616	108.733	161.245
	ಒಟ್ಟು	84.161	169.273	459.168	712.602

ಅನುಬಂಧ-2

ಹಾಸನ ಜಿಲ್ಲೆಯಲ್ಲಿ 2002-03ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿ ವಿವರಗಳು (ದಿ: 30.6.2002 ರಲ್ಲಿ)

ಕ್ರ. ಸಂ.	ವಿಧಾನಸಭಾ ಕ್ಷೇತ್ರದ ಹೆಸರು	ಅನುಷ್ಠಾನಗೊಳಿಸುತ್ತಿರುವ ಯೋಜನೆಯ ಹೆಸರು	ಜಲಾನಯನಗಳ ಸಂಖ್ಯೆ	ಅನುಮೋದಿತ ಕಾರ್ಯಕ್ರಮ ಆರ್ಥಿಕ
1	2	3	4	5
1.	ಹಾಸನ	ಪ.ಫ.ಅ.ಯೋ	3	16.627
		ಎಸ್.ಜೆ.ಆರ್.ವೈ.	23	11.650

1	2	3	4	5
1.	ಹಾಸನ	ಉ.ಭ.ಯೋ. (ಮುಂದುವರೆದ ಕಾಮಗಾರಿ)	3	16.030
		ಡಿ.ಪಿ.ಎ.ಪಿ.	6	63.000
		ರಾ.ಜ.ಆ.ಯೋ	-	-
		ಕೂಲಿಗಾಗಿ ಕಾಳು ಯೋಜನೆ	1	1.400
		ಒಟ್ಟು	36	107.307
2.	ಗಂಡಸಿ	ಪ.ಘ.ಅ.ಯೋ	3	19.41
		ಎಸ್.ಜೆ.ಆರ್.ವೈ.	16	22.61
		ಉ.ಭ.ಯೋ (ಮುಂದುವರೆದ ಕಾಮಗಾರಿ)	7	38.89
		ಡಿ.ಪಿ.ಎ.ಪಿ	2	20.000
		ರಾ.ಜ.ಆ.ಯೋ.	4	9.000
		ಕೂಲಿಗಾಗಿ ಕಾಳು ಯೋಜನೆ	26	27.515
		ನ.ಕ.ಯೋ	1	15.12
		ಒಟ್ಟು	59	152.545
3.	ಅರಸೀಕೆರೆ	ಎಸ್.ಜೆ.ಆರ್.ವೈ.	30	15.730
		ಉ.ಭ.ಯೋ (ಮುಂದುವರೆದ ಕಾಮಗಾರಿ)	7	32.995
		ಡಿ.ಪಿ.ಎ.ಪಿ	10	105.00
		ರಾ.ಜ.ಆ.ಯೋ.	4	9.00
		ಕೂಲಿಗಾಗಿ ಕಾಳು ಯೋಜನೆ	5	4.37
		ಒಟ್ಟು	56	167.095
4.	ಶ್ರವಣಬೆಳಗೊಳ	ಎಸ್.ಜೆ.ಆರ್.ವೈ.	37	22.680
		ಉ.ಭ.ಯೋ (ಮುಂದುವರೆದ ಕಾಮಗಾರಿ)	3	6.180
		ಡಿ.ಪಿ.ಎ.ಪಿ	8	78.000
		ರಾ.ಜ.ಆ.ಯೋ.	4	9.000
		ಕೂಲಿಗಾಗಿ ಕಾಳು ಯೋಜನೆ	5	3.255
		ಒಟ್ಟು	57	119.115

1	2	3	4	5
5.	ಹೊಳೆನರಸೀಪುರ	ಎಸ್.ಜೆ.ಆರ್.ವೈ.	26	17.790
		ಉ.ಭ.ಯೋ (ಮುಂದುವರೆದ ಕಾಮಗಾರಿ)	5	21.350
		ಡಿ.ಪಿ.ಎ.ಪಿ	8	45.000
		ರಾ.ಜ.ಅ.ಯೋ.	4	9.000
		ಒಟ್ಟು	38	93.14
6.	ಅರಕಲಗೂಡು	ಉ.ಭ.ಯೋ (ಮುಂದುವರೆದ ಕಾಮಗಾರಿ)	4	7.220
		ಎಸ್.ಜೆ.ಆರ್.ವೈ	27	15.430
		ರಾ.ಜ.ಅ.ಯೋ.	4	9.000
		ಒಟ್ಟು	35	31.65
7.	ಬೇಲೂರು	ಪ.ಫ.ಅ.ಯೋ	6	30.415
		ಎಸ್.ಜೆ.ಆರ್.ವೈ.	37	18.400
		ಉ.ಭ.ಯೋ (ಮುಂದುವರೆದ ಕಾಮಗಾರಿ)	7	7.620
		ಡಿ.ಪಿ.ಎ.ಪಿ	7	82.000
		ರಾ.ಜ.ಅ.ಯೋ.	4	9.000
		ಕೂಲಿಗಾಗಿ ಕಾಳು ಯೋಜನೆ	13	4.185
		ಒಟ್ಟು	74	151.62
8.	ಸಕಲೇಶಪುರ	ಪ.ಫ.ಅ.ಯೋ	11	57.39
		ಎಸ್.ಜೆ.ಆರ್.ವೈ.	87	30.369
		ಉ.ಭ.ಯೋ (ಮುಂದುವರೆದ ಕಾಮಗಾರಿ)	3	13.670
		ರಾ.ಜ.ಅ.ಯೋ.	7	18.000
		ಒಟ್ಟು	108	119.429
		ಜಿಲ್ಲೆಯ ಒಟ್ಟು	463	941.901

ಅನುಬಂಧ-3

ಹಾಸನ ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ವಿಧಾನಸಭಾ ಕ್ಷೇತ್ರವಾರು ಪಾವತಿಯಾಗಿರುವ ಅನುದಾನದ ವಿವರ. ಪಾವತಿಯಾಗಿರುವ ಅನುದಾನದ ಬಾಬ್ತು

ಕ್ರ. ಸಂ.	ವಿಧಾನಸಭಾ ಕ್ಷೇತ್ರದ ಹೆಸರು	99-2000	2000-01	2001-02	ಒಟ್ಟು
1	2	3	4	5	6
1.	ಹಾಸನ	-	19.212	25.060	44.272
2.	ಗಂಡಸಿ	61.184	21.667	50.276	133.127
3.	ಅರಸೀಕೆರೆ	8.090	8.092	31.552	47.734
4.	ಶ್ರವಣಬೆಳಗೊಳ	4.990	17.890	79.700	102.580
5.	ಹೊಳೆನರಸೀಪುರ	0.885	13.127	46.999	61.011
6.	ಬೇಲೂರು	2.004	32.418	74.218	108.640
7.	ಅರಕಲಗೂಡು	3.112	8.251	42.630	53.993
8.	ಸಕಲೇಶಪುರ	3.896	48.616	108.733	161.245
	ಒಟ್ಟು	84.161	169.273	459.168	712.602

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯುವುದು

712(1287) ಶ್ರೀ ಹಾಲಾಡಿ ಶ್ರೀನಿವಾಸ್ ಶೆಟ್ಟಿ (ಕುಂದಾಪುರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2002-03 ನೇ ಸಾಲಿನಲ್ಲಿ ರಾಜ್ಯದಲ್ಲಿ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗುವುದು?

ಇ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಎಷ್ಟು ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗುವುದು: ತೆರೆಯಲು ಉದ್ದೇಶಿಸಿದ ಕೇಂದ್ರದ ಸ್ಥಳಗಳು ಯಾವುವು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. 2002-03 ನೇ ಸಾಲಿನಲ್ಲಿ ಕೇಂದ್ರ ಸರಕಾರದ ಮಂಜೂರಾತಿ ದೊರೆತರೆ ರಾಜ್ಯದಲ್ಲಿ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗುವುದು

ಆ) 11313 ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗುವುದು